**KAAV INTERNATIONAL JOURNAL OF ARTS, HUMANITIES & SOCIAL SCIENCES**
**A REFEREED BLIND PEER REVIEW QUARTERLY JOURNAL**
**KIJAHS/OCT-DEC2017/VOL-4/ISS-4/A7 PAGE NO.23-27**
**ISSN: 2348-4349 IMPACT FACTOR (2017) – 7.9183**
**WWW.KAAVPUBLICATIONS.ORG**

# ಖಗೇಂದ್ರಮಣಿ ದರ್ಪಣಂ ಗ್ರಂಥದಲ್ಲಿ ಸ್ಥಾವರ ವಿಷಗಳ ಚರ್ಚೆ

# DISCUSSION ABOUT IMMOBILE VENOM IN KHAGENDRAMANI DARPANAM

**ವಿಳಾಸ:**

[1]**NEMINATH TAPAKEERE**
[1]Research Scholar, Kannada Study Centre
Karnatak University, Dharwad-580003

***ABSTRACT***

*ವಿಶ್ವಪರಂಪರೆಯಲ್ಲಿ ಭಾರತೀಯ ವೈದ್ಯಶಾಸ್ತ್ರವು ತನ್ನದೇ ಆದ ಕೊಡುಗೆಯನ್ನು ನೀಡುವ ಮೂಲಕ ಸುಮಾರು 3000 ವರ್ಷಗಳಿಂದ ಸುಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಅದು ವೇದಗಳ ಕಾಲದ ಇತಿಹಾಸವನ್ನು ಹೊಂದಿದ್ದು, ಅಥರ್ವವೇದದ ಕೌಶಿಕಸೂತ್ರದಲ್ಲಿ ಮಾಂತ್ರಿಕ ಕರ್ಮಗಳಲ್ಲಿ ಚಿಕಿತ್ಸಾಕಲೆ ಮತ್ತು ಗಿಡಮೂಲಿಕೆಗಳ ಬಗ್ಗೆ ತಿಳಿಸಲಾಗಿದೆ. ಶುಶ್ರುತ, ಚರಕ, ವಾಗ್ಭಟ, ಮಾಧವ, ಪರಾಶರ, ಯೋಗರತ್ನಾಕರರು ಭಾರತೀಯ ವೈದ್ಯಪರಂಪರೆಯನ್ನು ವಿಶ್ವಮಟ್ಟದಲ್ಲಿ ಬೆಳಕಿಗೆ ತಂದ ಮಹನೀಯರು. ಭಾರತೀಯ ವೈದ್ಯ ಪರಂಪರೆಯು ಬೆಳೆದು ಬಂದಿರುವುದು ಆಯುರ್ವೇದ ಶಾಸ್ತ್ರದ ನೆಲೆಯಲ್ಲಿ. ಈ ನೆಲೆಯಲ್ಲಿ ಕನ್ನಡ ಸಾಹಿತ್ಯಿಕ ಇತಿಹಾಸವನ್ನು ಅವಲೋಕಿಸಿದಾಗ ಅನೇಕ ವೈದ್ಯಗ್ರಂಥಗಳು ಲಭ್ಯವಾಗುತ್ತವೆ. ಈ ನಿಟ್ಟಿನಲ್ಲಿ ನಮಗೆ ಲಭಿಸಿದ ಅತ್ಯಪರೂಪದ ಗ್ರಂಥವೆಂದರೆ 14ನೇ ಶತಮಾನದಲ್ಲಿ ಒಂದನೇ ಮಂಗರಾಜನು ರಚಿಸಿದ 'ಖಗೇಂದ್ರಮಣಿ ದರ್ಪಣಂ'. ಸಂಸ್ಕೃತದಲ್ಲಿ ಕಾಶ್ಯಪ ಸಂಹಿತೆ ಇರುವಂತೆ ಕನ್ನಡದಲ್ಲಿ ಒಂದು ವಿಷಚಿಕಿತ್ಸಾ ಗ್ರಂಥವು ಬೇಕೆಂದು ಮಂಗರಾಜನು ಆಶಿಸಿದ್ದಾನೆ. ಕಾಶ್ಯಪ ಸಂಹಿತೆಗೆ ಗರುಡ ಪಂಚಾಕ್ಷರೀ ಕಲ್ಪಂ ಎಂಬ ಇನ್ನೊಂದು ಹೆಸರಿದ್ದು ಅದು ವಿಷಚಿಕಿತ್ಸೆಯನ್ನು ವಿಶದೀಕರಿಸುತ್ತದೆ. ಈ ಕೃತಿಯಲ್ಲಿ ವಿಷವೈದ್ಯಶಾಸ್ತ್ರದ ನಿರೂಪಣೆಯಿದೆ.*

**Copyright © 2017 Published by kaav publications. All rights reserved** www.kaavpublications.org